# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.447/2013

| | | | |
|---|---|---|---|
| ಚಾಸಾ | **9** | ಪ್ರಾಸಾ | **8** |
| ಹೆಸರು | | ಡಾ, ವಾಸಿಂ ಇಮ್ರಾನ್ | |
| ತಂದೆಯ ಹೆಸರು / ಗಂಡನ ಹೆಸರು | | ಇಜಾಜ್ ಪಾಷ | |
| ವಯಸ್ಸು | | **50**ವರ್ಷಗಳು | |
| ಉದ್ಯೋಗ | | ಹಿರಿಯ ವೈದ್ಯಾಧಿಕಾರಿಗಳು | |
| ವಿಳಾಸ | | ತುಮಕೂರು | |

ದಿನಾಂಕ**.04.08.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾನು ಜೂನ್ **2008** ರಿಂದ ಫೆಬ್ರವರಿ **2016**ರ ವರೆಗೆ ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ**.04.05.2012**ರಂದು ರಾತ್ರಿ **11.10** ಗಂಟೆ ಸಮಯಕ್ಕೆ ಹಲ್ಲೆಯ ಹಿನ್ನಲೆಯಲ್ಲಿ ಚಾಸಾ**-1** ರವರು ಚಿಕಿತ್ಸೆಗಾಗಿ ನಮ್ಮ ಅಸ್ಪತ್ರೆಗೆ ಬಂದಿರುತ್ತಾರೆ. ನಾನು ಚಾಸಾ**-1** ರವರನ್ನು ಪರಿಶೀಲಿಸಿದಾಗ ಅವರ ಬಲಗಣ್ಣಿನ ಸುತ್ತಮುತ್ತ ಉಬ್ಬಿದ ಗಾಯ,

ಎಡಗೈನ ಮೇಲೆ ಊತದ ಗಾಯ, ಎಡಗಾಲಿನ ಕೆಳಭಾಗದಲ್ಲಿ ಕೆಂಪು ರಕ್ತಹೆಪ್ಪುಗಟ್ಟಿದ ಉಬ್ಬಿದ ಗಾಯ, ಎಡಗಣ್ಣಿನ ಕೆಳರೆಪ್ಪೆಯ ಭಾಗದಲ್ಲಿ ಊತದ ಗಾಯ ಇದ್ದದ್ದು ಕಂಡುಬಂದಿರುತ್ತದೆ. ನಾನು ಸದರಿ ಗಾಯಗಳಿಗೆ ಚಿಕಿತ್ಸೆ ನೀಡಿರುತ್ತೇನೆ. ಚಾಸಾ-1 ರವರಿಗೆ ಆದಂತಹ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದು ನಾನು ಅಭಿಪ್ರಾಯ ಪಟ್ಟು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ಸಾಕ್ಷಿಯು ಚಾಸಾ-1 ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರವನ್ನು ಕಡತದಲ್ಲಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-4 (ಎ) ಎಂದು ಗುರುತಿಸಲಾಯಿತು. ಚಿಕಿತ್ಸೆಯ ಸಮಯದಲ್ಲಿ ಚಾಸಾ-1ರವರು ತಾವು ಅರೋಪಿಯನ್ನು ದಸ್ತಗಿರಿ ಮಾಡಲು ಹೋದಾಗ ತಮಗೆ ಹಲ್ಲೆ ಮಾಡಿರುತ್ತಾರೆ ಎಂಬ ಸಂಗತಿಯನ್ನು ನನಗೆ ತಿಳಿಸಿರುತ್ತಾರೆ.

<u>ಪಾಟೀ ಸವಾಲುಃ- ಆರೋಪಿತರ ಪರ ವಕೀಲರಾದ ಶ್ರೀ ಕೆಬಿಕೆ ರವರಿಂದಃ-</u>

ಚಾಸಾ-1 ರವರನ್ನು ಪರಿಶೀಲಿಸಲು ಅಥವಾ ಅವರಿಗೆ ಚಿಕಿತ್ಸೆ ನೀಡಲು ಆ ದಿನ ಎಷ್ಟು ಸಮಯವನ್ನು ನಾನು ತೆಗೆದುಕೊಂಡಿದ್ದೆ ಎಂದು ಖಚಿತವಾಗಿ ಹೇಳಲು ನನಗೆ ಸಾಧ್ಯವಿಲ್ಲ. ನಿಪಿ-4ರಲ್ಲಿ ಚಾಸಾ-1 ರವರ ಮನೆಯ ವಿಳಾಸವನ್ನು ನಮೂದಿಸಿಲ್ಲ ಎಂದರೆ ಸರಿ. ಚಾಸಾ-1 ರವರು ಆ ದಿನ ಸ್ವತಃ ಚಿಕಿತ್ಸೆಗಾಗಿ ಬಂದಿರುತ್ತಾರೆ. ಚಾಸಾ-1 ರವರು ನನ್ನ ಸ್ನೇಹಿತನಲ್ಲ. ಹಾರೋಹಳ್ಳಿಯಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಹಾರೋಹಳ್ಳಿ ಗ್ರಾಮದಲ್ಲಿ ಖಾಸಗಿ

ಆಸ್ಪತ್ರೆಗಳು ಹಲವಾರು ಇದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಮರಳವಾಡಿಯಲ್ಲೂ ಸಹ ಸರ್ಕಾರಿ ಆಸ್ಪತ್ರೆ ಮತ್ತು ಖಾಸಗಿ ಆಸ್ಪತ್ರೆಗಳು ಇವೆ ಎಂದರೆ ನನಗೆ ಗೊತ್ತಿಲ್ಲ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಮೋರಿಯನ್ನು ದಾಟುವ ಸಮಯದಲ್ಲಿ ಆಯಾತಪ್ಪಿ ಕೆಳಗೆ ಬಿದ್ದರೆ ನಿಪಿ-4ರಲ್ಲಿ ನಮೂದಿಸಿದ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಕೈಗಳ ಮೇಲೆ ಸಾಮಾನ್ಯವಾಗಿ ಗಾಡಿಯ ಮೇಲಿಂದ ಕೆಳಗೆ ಬಿದ್ದಾಗಲೂ ಆ ರೀತಿಯ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿಯಲ್ಲ. ಒಂದು ಹರಿತವಾದ ಆಯುಧದಿಂದ ಅಥವಾ ವಸ್ತುವಿನಿಂದ ಹೊಡೆದಾಗ ನಿಪಿ-4ರಲ್ಲಿ ನಮೂದಿಸಿದ ಗಾಯಗಳಾಗುವ ಸಾಧ್ಯತೆ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆ ದಿನ ಚಾಸಾ-1 ರವರು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದಿಲ್ಲ ಮತ್ತು ನಾನು ಆತನಿಗೆ ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಬೇಕೆಂದು ನಿಪಿ-4ರಂತೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಆ ದಿನ ನನಗೆ ರಾತ್ರಿಯ ಆಸ್ಪತ್ರೆಯ ಕರ್ತವ್ಯಕ್ಕೆ ನೇಮಿಸಲಾಗಿತ್ತು. ಆ ದಿನ ನಾನು ಆಸ್ಪತ್ರೆಯಲ್ಲಿ ರಾತ್ರಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ನಿಪಿ-4ನ್ನು ನೀಡಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**